## ಏಳು ದಶಕಗಳ ಬುನಾದಿಯಲ್ಲಿ

# ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘದ ಮುನ್ನಡೆ...

*- ಎಂ. ಎಸ್. ರಘುನಾಥ ರಾವ್, ಉಪಾಧ್ಯಕ್ಷರು*

ಕಳೆದ ಏಳು ದಶಕಗಳಲ್ಲಿ ಶ್ರೀ ಸುಬ್ರಹ್ಮಣ್ಯ ಕೋ-ಓಪರೇಟಿವ್ ಬೇಂಕ್, ಲಿಮಿಟೆಡ್ ಸಾಗಿಬಂದ ದಾರಿ ಸಂಕೀರ್ಣವಾದುದು. ಸತತ ಪ್ರಯತ್ನ, ನಿಷ್ಠೆ, ಸದಸ್ಯರ ಸೇವಾ ಮನೋಭಾವ ಇದರ ಹಿಂದಿನ ಶಕ್ತಿ. ಎಪ್ಪತ್ತು ವರ್ಷಗಳ ಹಿಂದೆ ಸಹಕಾರದಲ್ಲಿ ನಂಬಿಕೆಯುಳ್ಳ ಉತ್ಸಾಹಿ ಸದಸ್ಯರಿಂದ ಸ್ಥಾಪನೆಯಾದ ಈ ಆರ್ಥಿಕ ವ್ಯವಹಾರದ ಸಂಸ್ಥೆ ತನ್ನ ಸಮಾಜ ಬಾಂಧವರಿಂದ ಶಕ್ತಿಯನ್ನು ಪಡೆದು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಳ್ಳುತ್ತಾ ಬಂದು ಇಂದಿನ ಸುಭದ್ರ ಸ್ಥಿತಿಗೆ ತಲುಪಿದೆ. ಸ್ವಾತಂತ್ರ್ಯ ಪೂರ್ವದ ಕಾಲಘಟ್ಟದಿಂದಲೂ ತನ್ನದೇ ಸಂಪನ್ಮೂಲವನ್ನು ಕ್ರೋಢೀಕರಿಸಿಕೊಳ್ಳುತ್ತಾ ಬಂದು ಇಂದು ಜಿಲ್ಲೆಯ ಉತ್ತಮ ಸಹಕಾರಿ ಸಂಸ್ಥೆಗಳಲ್ಲಿ ಒಂದಾಗಿದೆ. ಈ ನಡುವೆ ಸಹಕಾರಿ ನಿಬಂಧನೆಯ ಪ್ರಕಾರ ಇದರ ಹೆಸರು ಪರಿಷ್ಕಾರಗೊಂಡು ಶ್ರೀ ಸುಬ್ರಹ್ಮಣ್ಯ ಸಹಕಾರಿ ಸಂಘ ನಿಯಮಿತ, ಮಂಗಳೂರು ಎಂಬ ಹೆಸರಿನಲ್ಲಿ ವ್ಯವಹಾರ ನಡೆಸುತ್ತಿದೆ.

ವೃತ್ತಿಯಲ್ಲಿ ವೈದ್ಯರಾದ ಎನ್. ವಿ. ಉಪಾಧ್ಯಾಯರು ಸಹಕಾರಿ ಕ್ಷೇತ್ರಕ್ಕೆ ಒಂದು ಸಂದಿಗ್ಧ ಸಂದರ್ಭದಲ್ಲಿ ಪ್ರವೇಶಿಸಿದರು. ಉಪಾಧ್ಯಾಯರ ಚಿಕಿತ್ಸಾಲಯವೆಂದರೆ, ಅಂದಿನ ದಿನಗಳಲ್ಲಿ ಹಲವು ಮಂದಿ ಸಮಾನಮನಸ್ಕರು ಒಂದೆಡೆ ಕಲೆತು ಚರ್ಚಿಸುವ ಸ್ಥಳ.

ಸಾಮಾನ್ಯವಾಗಿ ಸಮಾಜದ ದುಸ್ಥಿತಿಯ ಬಗೆಗೆ ನಡೆಯುತ್ತಿದ್ದ ಚರ್ಚೆಯಲ್ಲಿ ಬಂದ ಪ್ರಸ್ತಾಪವೇ ಸಹಕಾರಿ ಸಂಸ್ಥೆಯ ಸ್ಥಾಪನೆ. ಸಣ್ಣದಾಗಿ ಆರಂಭವಾದ ಈ ಚರ್ಚೆ ಶ್ರೀ ಸುಬ್ರಹ್ಮಣ್ಯ ಕೋ-ಓಪರೇಟಿವ್ ಬೇಂಕ್, ಲಿಮಿಟೆಡ್ ಸಂಸ್ಥೆಯನ್ನು ಸ್ಥಾಪಿಸುವ ಸಂಕಲ್ಪದೊಂದಿಗೆ ಮೂರ್ತ ಸ್ವರೂಪವನ್ನು ಪಡೆಯಿತು. ವೈ. ನಾರಾಯಣ ರಾಯರು ಈ ಸಹಕಾರಿ ಸಂಸ್ಥೆಯನ್ನು ಸ್ಥಾಪಿಸಲು ಉಪನಿಬಂಧನೆಗಳನ್ನು ಸಿದ್ಧಪಡಿಸಿದರು. ಈ ಬ್ಯಾಂಕಿನ ಹಿಂದಿನ ಪ್ರೇರಕ ಶಕ್ತಿಯಾದ ಡಾ| ಎನ್.ವಿ. ಉಪಾಧ್ಯಾಯರು ವ್ಯವಸ್ಥಾಪಕರಾಗಿ ದಿನಾಂಕ 25-12-1935ರಂದು ದ. ಕ. ಸಹಕಾರಿ ಸಂಘಗಳ ಡೆಪ್ಯುಟಿ ರಿಜಿಸ್ಟ್ರಾರರವರಿಗೆ ಸಂಸ್ಥೆಯನ್ನು ನೋಂದಾಯಿಸುವ ಸಲುವಾಗಿ ಅರ್ಜಿಯನ್ನು ಸಲ್ಲಿಸಿದರು. ಇದಕ್ಕೆ ಯು. ಎ. ಭವಾನಿಶಂಕರ ರಾವ್, ಮರೋಳಿ ಗೋಪಾಲಕೃಷ್ಣ ರಾವ್, ಮಾಂಟ್ರಾಡಿ ಕೃಷ್ಣರಾವ್, ಪಿ. ಈಶ್ವರಯ್ಯ, ಎ. ಕೃಷ್ಣರಾವ್, ಬಿ. ಎಸ್. ಗುಂಡುರಾವ್, ಮಂಕುಡೆ ಶಂಕರನಾರಾಯಣ ರಾವ್ ಮೊದಲಾದ 26 ಮಂದಿ ಸಹಿ ಮಾಡಿದ್ದರು.

ಹೀಗೆ ಸಲ್ಲಿಕೆಯಾದ ಅರ್ಜಿಯನ್ನು ಪರಿಶೀಲಿಸಲು ಸಹಕಾರ ಸಂಘಗಳ ಇನ್‌ಸ್ಪೆಕ್ಟರ್ ಎಂ. ಪಿ. ಭಂಡಾರಿಯವರು ಇನ್ನ ಬಾಬು ರಾಯರ ಭವನದಲ್ಲಿ ಸಭೆಯನ್ನು ನಡೆಸಿದರು. ಈ ಸಭೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದ ಸಮಾಜದ ಬಾಂಧವರು ಸಂಸ್ಥೆಯನ್ನು ರಿಜಿಸ್ಟ್ರಿ ಮಾಡುವುದು ಆವಶ್ಯಕವೆಂದು ನಿರ್ಣಯಿಸಿದರು. ಅಲ್ಲದೆ, ಈ ಅರ್ಜಿಯನ್ನು ಸರ್ವಾನುಮತದಿಂದ ಮಂಜೂರು ಮಾಡಿಸಿದರು. ಈ ಸಂದರ್ಭದಲ್ಲಿ ಬ್ಯಾಂಕು ರಿಜಿಸ್ಟ್ರಿಯಾಗುವುದಕ್ಕೆ ಮೊಳಹಳ್ಳಿ ಶಿವರಾಯರು ಸಹಾಯ ಮಾಡಿದ್ದರು. ಎಂ. ಪಿ. ಭಂಡಾರಿಯವರ ಶಿಫಾರಸ್ಸನ್ನು ಆಧರಿಸಿ ದ. ಕ. ಸಹಕಾರಿ ಸಂಘಗಳ ಡೆಪ್ಯುಟಿ ರಿಜಿಸ್ಟ್ರಾರರು, ಮಂಗಳೂರು ನಗರ ಸಭಾಕ್ಷೇತ್ರ ಮತ್ತು ಅದರ ಐದು ಮೈಲು ಸುತ್ತಳತೆಯ ಪರಿಮಿತಿಯಲ್ಲಿ ಕಾರ್ಯಾಚರಿಸಲು ಅನುಮತಿ ನೀಡಿದರು. ಹೀಗೆ ಶ್ರೀ ಸುಬ್ರಹ್ಮಣ್ಯ ಕೋ-ಓಪರೇಟಿವ್ ಬೇಂಕ್ ಲಿಮಿಟೆಡ್, L 366, ಮಂಗಳೂರು ಎಂಬ ಸಂಸ್ಥೆಯನ್ನು ದಿನಾಂಕ 23-10-1936ರಂದು ನೋಂದಾವಣೆಯಾಯಿತು.

ದಿನಾಂಕ 8-11-1936ನೇ ಇಸವಿ ಆದಿತ್ಯವಾರ, ಈ ಸಂಸ್ಥೆಯು ಜನ್ಮತಳೆದ ದಿನ. ಕದ್ರಿ ರಸ್ತೆಯಲ್ಲಿನ ಬಪ್ಪನಾಡು ಗೋವಿಂದ ರಾಯರು ವಾಸಿಸುತ್ತಿದ್ದ ಮಥಾದೋ ಕಟ್ಟಡದ ಮಾಳಿಗೆಯಲ್ಲಿ ನಡೆದ ಸಭೆಯಲ್ಲಿ ಬೇಂಕಿನ ರಿಜಿಸ್ಟ್ರೇಶನ್ ಸರ್ಟಿಫಿಕೇಟ್ ಮತ್ತು ಉಪನಿಬಂಧನೆಗಳನ್ನು ಓದಿ ಮಂಜೂರು ಮಾಡುವುದರ ಮೂಲಕ ಸಂಸ್ಥೆಯ ಆರಂಭಕ್ಕೆ ಶ್ರೀಕಾರವನ್ನು ಬರೆಯಲಾಯಿತು. ಡಾ| ಎನ್.ವಿ. ಉಪಾಧ್ಯಾಯರು ಈ ಸಭೆಯ ನೇತೃತ್ವವನ್ನು ವಹಿಸಿದ್ದರು. ಅಲ್ಲದೆ, ಬೇಂಕಿನ ಆಡಳಿತ ಮಂಡಳಿಯ ರಚನೆಯೂ ಆಯಿತು. ಡಾ| ಕೆ. ಎನ್. ಶರ್ಮರು ಅಧ್ಯಕ್ಷರಾಗಿ, ಡಾ| ಎನ್. ವಿ. ಉಪಾಧ್ಯಾಯರು ಕಾರ್ಯದರ್ಶಿಯಾಗಿ ಸರ್ವಾನುಮತದಿಂದ ಆಯ್ಕೆಯಾದರು. ಕದ್ರಿ ಆನಂದ ರಾವ್, ಬಿ. ಭವಾನಿ ರಾವ್ ಮತ್ತು ಎ. ಕೃಷ್ಣರಾವ್ ಮೊದಲ ಆಡಳಿತ ಮಂಡಳಿಯ ಸದಸ್ಯರು. ಸಭೆಯಲ್ಲಿ ಭಾಗವಹಿಸಿದ್ದ ಹನ್ನೆರಡು ಮಂದಿಗೆ ಪಾಲು ಮಂಜೂರಾತಿ ನಡೆಯಿತು. ಬಿ. ಭವಾನಿ ರಾವ್, ಬಿ. ವಿಠಲ ರಾವ್, ಎನ್. ವಿ. ಉಪಾಧ್ಯಾಯ,

ಬಿ. ಗೋವಿಂದ ರಾವ್, ಬಿ. ಎಸ್. ಗುಂಡುರಾವ್, ಎ. ಕೃಷ್ಣರಾವ್, ಯು. ಲಕ್ಷ್ಮೀನಾರಾಯಣ ರಾವ್, ಬಿ. ನರ್ಸಪ್ಪಯ್ಯನವರಿಗೆ 'ಒಂದು ಪಾಲು' ಹಾಗೂ ಐ.ಕೆ.ಪಿ. ಶರ್ಮಾ, ಕದ್ರಿ ಆನಂದ ರಾವ್, ಕೆ. ಎನ್. ಶರ್ಮ, ಕುಡ್ಪಿ ಆನಂದ ರಾವ್ 'ಎರಡು ಪಾಲು' ಪಡೆದರು. ಹೀಗೆ ಆರಂಭವಾದ ಈ ಸಂಸ್ಥೆಯ ಕಾರ್ಯವ್ಯಾಪ್ತಿಯನ್ನು ಇಡೀ ಜಿಲ್ಲೆಗೆ ವಿಸ್ತರಿಸುವ ಸಲುವಾಗಿ ಉಪನಿಬಂಧನೆಗೆ ತಿದ್ದುಪಡಿ ತಂದು ದಿನಾಂಕ 23-2-1940ರಲ್ಲಿ ರಿಜಿಸ್ಟ್ರಿ ಮಾಡಲಾಗಿದೆ.

ಈ ಸಂಸ್ಥೆಯನ್ನು ಆರಂಭಿಸುವುದರ ಹಿಂದೆ ಮುಖ್ಯವಾಗಿ ಮೂರು ಉದ್ದೇಶಗಳಿದ್ದವು. ಠೇವಣಿಗಳನ್ನು ಸ್ವೀಕರಿಸಿ ಸದಸ್ಯರಿಗೆ ಸಾಲ ವಿತರಣೆ, ಗೃಹಕೃತ್ಯದ ಅಗತ್ಯ ವಸ್ತುಗಳನ್ನು ಕೊಳ್ಳಲು ನೆರವು. ಮಿತವ್ಯಯ, ಸ್ವಾವಲಂಬನೆ ಮತ್ತು ಸದಸ್ಯರಲ್ಲಿ ಪರಸ್ಪರ ಸಹಕಾರದ ಅರಿವು ಮೂಡಿಸುವುದು ಇತ್ಯಾದಿ.

ಆರಂಭದಲ್ಲಿ ಒಂದು ಪಾಲಿನ ಬೆಲೆ ಐದು ರೂಪಾಯಿ ಯಾಗಿತ್ತು. ಇಂತಹ 1,000 ಪಾಲುಗಳ 5,000 ರೂಪಾಯಿ ಅಧಿಕೃತ ಪಾಲು ಬಂಡವಾಳವಾಗಿತ್ತು. 1947ರಲ್ಲಿ 10,000 ರೂಪಾಯಿ, 1945ರಲ್ಲಿ 25,000 ರೂಪಾಯಿಯಾಗಿ ಪಾಲುಬಂಡವಾಳ ಬೆಳೆಯಿತು. 5 ರೂಪಾಯಿಯ 20 ಪಾಲು ಗಳನ್ನು ಪಡೆಯಲು ಮೊದಲು ಸದಸ್ಯರಿಗೆ ಅವಕಾಶವಿತ್ತು. 1955ರಲ್ಲಿ ಇದನ್ನು 200 ಪಾಲುಗಳಿಗೆ ಏರಿಸಲಾಗಿದೆ. ಸಂಸ್ಥೆ 25ನೇ ವರ್ಷಕ್ಕೆ ತಲುಪುವ ಹೊತ್ತಿಗೆ 319 ಸದಸ್ಯ ರಿದ್ದರು. 11,940 ರೂಪಾಯಿ ಒಟ್ಟು ಪಾಲುಬಂಡವಾಳದ ಮೊತ್ತವಾಗಿತ್ತು. ಅತ್ಯಂತ ಹೆಚ್ಚು ಅಂದರೆ 100 ಪಾಲುಗಳನ್ನು ಪಡೆದ ಕೀರ್ತಿ ಕುಡ್ಪಿ ಭಾಸ್ಕರ ರಾಯರಿಗೆ ಸಲ್ಲುತ್ತದೆ.

ನಿರಖು, ಮಾಸಿಕ, ಸಂಚಯ ಮತ್ತು ಚಾಲ್ತಿ ಠೇವಣಿಗಳ ಮೂಲಕ ಈ ಸಂಸ್ಥೆ ಸಂಪನ್ಮೂಲಗಳನ್ನು ಕ್ರೋಢೀಕರಿಸು ತ್ತಿತ್ತು. ಸಂಸ್ಥೆ ಆರಂಭವಾಗಿ ಇಂದಿನ ತನಕವೂ ದ. ಕ. ಸೆಂಟ್ರಲ್ ಸಹಕಾರಿ ಬೇಂಕಿನಿಂದ ಸಾಲವನ್ನು ಪಡೆದಿಲ್ಲ ವೆಂಬುದು ಅದರ ವ್ಯವಹಾರದ ಗುಣಮಟ್ಟವನ್ನು ತೋರಿಸು ತ್ತದೆ. ವ್ಯವಹಾರದಲ್ಲಿ ಈ ರೀತಿಯ ಆರ್ಥಿಕ ಸ್ವಾವಲಂಬನೆ ನಿಜಕ್ಕೂ ಅಭಿನಂದನೀಯ ಸಂಗತಿ. ಹೆಮ್ಮೆಯ ವಿಷಯ. ಸಂಸ್ಥೆ 25ನೇ ವರ್ಷಕ್ಕೆ ತಲುಪುವಾಗ ಸಂಗ್ರಹಿಸಿದ ಠೇವಣಿ ಗಣನೀಯವಾಗಿತ್ತು.

ಈ ಸಂಸ್ಥೆಯಲ್ಲಿ ಮೊದಲು ನಿರಖು ಠೇವಣಿ ನೀಡಿದವರು ಶ್ರೀಮತಿ ಬಿ. ಪದ್ಮಾವತೀ ದೇವಿ ವಿಠಲರಾಯರು. ಇದೇ ರೀತಿ ಮಾಸಿಕ ಠೇವಣಿಯನ್ನು ಯು. ಲೀಲಾವತೀ ಬಾಯಿ, ಚಾಲ್ತಿ ಠೇವಣಿಯನ್ನು ಬಿ. ಎಸ್. ಗುಂಡುರಾಯರು ಹಾಗೂ ಸಂಚಯ ಠೇವಣಿಯನ್ನು ಡಾ! ಕೆ. ಎನ್. ಶರ್ಮರು ನೀಡಿರುವರು. ನಿರಂತರವಾಗಿ ಪ್ರಗತಿಯ ಪಥದಲ್ಲಿ ಮುನ್ನಡೆದ ಈ ಸಂಸ್ಥೆಯಲ್ಲಿ ಪ್ರಸ್ತುತ 363 ಸದಸ್ಯರಿದ್ದಾರೆ. ವಿವಿಧ ಠೇವಣಿಗಳ ಒಟ್ಟು ಮೊತ್ತ 22,47,024-00 ರೂಪಾಯಿ ಗಳು. ಆರಂಭದಿಂದಲೂ ಲಾಭದಲ್ಲೇ ನಡೆಯುತ್ತ ಬಂದ ಸಂಸ್ಥೆ 25ನೇ ವರ್ಷದವರೆಗೆ ಶೇ. 5ರಂತೆ, ಅನಂತರ ಶೇ. 6ರಂತೆ ಲಾಭಾಂಶವನ್ನು ಹಂಚಿದೆ. ಪ್ರಸ್ತುತ ಶೇ. 50 ಲಾಭಾಂಶವನ್ನು ಸದಸ್ಯರಿಗೆ ನೀಡುತ್ತಿದೆ.

ಸಂಸ್ಥೆ ಆರಂಭವಾದಾಗ ಸದಸ್ಯರು ಅವರು ಪಡೆದ ಪಾಲು ಮೊಬಲಗಿನ ಐದರಷ್ಟು ಸಾಲವನ್ನು ಪಡೆಯಲು ಅವಕಾಶವಿತ್ತು. ಕಾಲಕ್ರಮದಲ್ಲಿ ಈ ಮಿತಿಯನ್ನು ಹೆಚ್ಚಿಸಿದೆ. ವ್ಯಾಪಾರದ ಸಲುವಾಗಿ ಮೊದಲು ಯು. ಲಕ್ಷ್ಮೀ ನಾರಾಯಣ ರಾಯರು ಜಾಮೀನು ಸಾಲ ಪಡೆದ ವ್ಯಕ್ತಿ. ಸ್ಥಿರಾಸ್ತಿ ಅಡವಿನ ಸಾಲವನ್ನು ಮೊದಲು ಪಡೆದು ಬ್ಯಾಂಕಿನ ವ್ಯವಹಾರಕ್ಕೆ ಚಾಲನೆ ನೀಡಿದವರು ಎಂ. ಕೃಷ್ಣರಾಯರು. ಹೆಚ್ಚಿನ ಸಾಲಗಳು ನಿಯಮಿತವಾಗಿ ಸಾಲ ಮರುಪಾವತಿಯಾಗುತ್ತಿದ್ದರೂ ಕೆಲವೊಮ್ಮೆ ಕೋರ್ಟಿನ ಮೂಲಕ ವಸೂಲಿ ಮಾಡುವ ಪ್ರಸಂಗವೂ ಬಂದಿದ್ದಿದೆ.

1956ರ ವರೆಗೆ ಆಡಳಿತ ಮಂಡಳಿಯ ಅಧಿಕಾರಾವಧಿ ಒಂದು ವರ್ಷವಾಗಿತ್ತು. ಅನಂತರ ಇದನ್ನು ಮೂರು ವರ್ಷವೆಂದು ತಿದ್ದುಪಡಿ ಮಾಡಿದೆ. ಪ್ರಸ್ತುತ ಈ ಸಂಸ್ಥೆಯ ಅಧ್ಯಕ್ಷರಾಗಿ ಶ್ರೀ ಐ.ವಿ.ಕೆ. ರಾವ್, ಚಾರ್ಟಡ್ ಅಕೌಂಟೆಂಟ್, ಉಪಾಧ್ಯಕ್ಷರಾಗಿ ಶ್ರೀ ಎಂ. ಎಸ್. ರಘುನಾಥ ರಾವ್, ಪುತ್ತೂರು ಹಾಗೂ ಆಡಳಿತ ಮಂಡಳಿಯ ಸದಸ್ಯರಾಗಿ ಶ್ರೀ ಎನ್.ಎಸ್. ನಟರಾಜ್, ಶ್ರೀ ಅನಿಲ್ ರಾವ್ ಬಿ.ಎಸ್., ಶ್ರೀಮತಿ ಕನಕವಲ್ಲಿ ಹರ್ಷಕುಮಾರ್, ಶ್ರೀ ಪ್ರದೀಪ್ ರಾವ್ ಕೆ., ಶ್ರೀ ಕರುಣ್ ರಾವ್ ಬೆಳ್ಳೆ, ಶ್ರೀ ಚೇತನ್ ಶರ್ಮ ಎಂ., ಶ್ರೀ ಪ್ರವೀಣ್ ಕುಮಾರ್ ಅದ್ಯಪಾಡಿ ಹಾಗೂ ಕಾರ್ಯದರ್ಶಿಯಾಗಿ ಶ್ರೀಮತಿ ಮಮತಾ ರಾವ್ - ಇವರುಗಳು ಸೇವೆ ಸಲ್ಲಿಸುತ್ತಿದ್ದಾರೆ.

ಒಂದು ಸಂಸ್ಥೆಯ ವ್ಯವಹಾರದ ಗುಣಮಟ್ಟವೇ ಅದರ ಆರ್ಥಿಕ ಭದ್ರತೆಗೆ ಕಾರಣ. 1936ರಲ್ಲಿ 12 ಸದಸ್ಯರ 16 ಪಾಲುಗಳ 80 ರೂಪಾಯಿಯ ಬಂಡವಾಳದಿಂದ ಆರಂಭ ವಾದ ಸಂಸ್ಥೆಯು ಪ್ರಗತಿಪಥದಲ್ಲಿ ಮುಂದುವರಿದು ಇಂದು ಸುಭದ್ರ ನೆಲೆಗೆ ತಲುಪಿರುವುದು ಹೆಮ್ಮೆಯ ವಿಷಯ. ಇದಕ್ಕೆ ಸಮಾಜ ಬಾಂಧವರ ತುಂಬು ಹೃದಯದ ಸಹಕಾರವೇ ಕಾರಣ. ಮುಂದಿನ ದಿನಗಳಲ್ಲಿ ನಮ್ಮ ಈ ಸಂಸ್ಥೆಗೆ ಹೆಚ್ಚಿನ ಬೆಂಬಲ ವನ್ನು ಹಾರೈಸುತ್ತೇವೆ.

---

*ನೂತನ ಕಟ್ಟಡದ ಶುಭಾರಂಭದಂದು ಸಭೆಯ ಮುಂದಿಟ್ಟ ವರದಿ.*